# ಕೈ ತುತ್ತು

ಅಮ್ಮ ಅಮ್ಮ ಪ್ರೀತಿಯ ಅಮ್ಮ
ಮಕ್ಕಳ ಡಾಕ್ಟರ ಬಳಿಗೊಯ್ಯಿ
ಹೊಟ್ಟೆಯು ಅನುತಿದೆ ಕುಯ್ ಕುಯ್
ಅಜ್ಜಿಯು ಕೊಡಿಸಿದ ಚಾಕ್ ಲೇಟು
ಅಜ್ಜನು ಕೊಡಿಸಿದ ಬಿಸ್ಕೆಟ್ಟು
ಹೊಟ್ಟೆಯ ಭರ್ತಿ ತಿಂದ್ಬಿಟ್ಟು
ಆಗಿದೆ ಈಗ ಬಿಕ್ಕಟ್ಟು

ತಿನ್ನುವುದಿಲ್ಲ ಕುರುಕುರೆ
ಮಾಡುವುದಿಲ್ಲ ಕರ ಕರೆ
ಪೆಪ್ಸಿ, ಕೋಕು, ಚಿಪ್ಸ್, ಕೇಕು
ಬೇಡವೆ ಬೇಡ ಎತ್ತಿಬಿಸಾಕು
ಅಮ್ಮನ ಕೈತುತ್ ಅಮೃತ ಸಾಕು
ಬೇರೆ ಎಲ್ಲವೂ ಏತಕೆ ಬೇಕು

